ಅದಾಸಂ.268/2020, ಪಿಡಬ್ಲ್ಯು2

ದಿಃ 30.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದೇನೆ. ಇದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಇದಕ್ಕೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ಇದರಲ್ಲಿರುವ ಸಹಿ ನನ್ನದೇ ಆಗಿದೆ.

**ಪಾಟೀ ಸವಾಲುಃ ಸಸಅ ರವರಿಂದ**

ವಾದಿಯ ಪರಿಚಯವಿದೆ. ವಾದಿಯ ತಂದೆ ಗಂಗಪ್ಪನಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಖರೀದಿಸಿದಾಗ ಸ.ನಂ. ನಲ್ಲಿ ಇತ್ತು. ಸ.ನಂ. ವಿಸ್ತೀರ್ಣ ಗೊತ್ತಿಲ್ಲ. ಸದರಿ ಸ.ನಂ. ಗಳಲ್ಲಿ ಸೈಟ್ ಗಳನ್ನು ನಿರ್ಮಾಣ ಮಾಡಿಲ್ಲ. 1998-99 ರಲ್ಲಿ ವಾದಿಯ ತಂದೆ ಸ್ವತ್ತನ್ನು ಖರೀದಿಸಿರುತ್ತಾರೆ. ದಾವಾ ಸ್ವತ್ತಿನ ಚಕ್ಕು ಬಂದಿ ಪೂ- ಸರ್ಕಾರಿ ಸ್ವತ್ತು, ಪ- ಪಂಚಾಯಿತಿ ಸ್ವತ್ತು, ಉ -ಪಂಚಾಯಿತಿ ಜಾಗ ದ- ರಸ್ತೆ ಇರುತ್ತದೆ.

2. ಅಸೆಸ್ಮೆಂಟ್ ಈಗ ಯಾರು ಹೆಸರಿನಲ್ಲಿ ಗೊತ್ತಿಲ್ಲ, ಆದರೆ ವಾದಿ ಸ್ವಾಧೀನದಲ್ಲಿ ಇದ್ದಾರೆ. 2 ನೇ ವಾದಿ ಪಂಚಾಯಿತಿಯಲ್ಲಿ ಏನು ಕೆಲಸ ಮಾಡುತ್ತಾರೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಳಿ ಪ್ರತಿವಾದಿಗಳು ಯಾರು ಬಂದಿದ್ದರು ನನಗೆ ಗೊತ್ತಿಲ್ಲ. ಪಂಚಾಯಿತಿಯವರು ವಾದಿಗಳಿಗೆ ನೋಟೀಸ್ ನೀಡಿರುತ್ತಾರೆ. ದಾವಾ ಸ್ವತ್ತು ಪಂಚಾಯಿತಿಗೆ ಸೇರಿದ್ದು ಎಂದರೆ ಸರಿಯಲ್ಲ. ಸ.ನಂ. 54, 5 ಎಕರೆ 5 ಗುಂಟೆ ಜಮೀನು ಪಂಚಾಯಿತಿ ಸ್ವತ್ತು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ